ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಸುತ್ತೋಲೆ/ಸ.ಪ್ರ.ದ.ಕಾ/ಆಯವ್ಯಯ/06/2021-22.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:04.01.2022.

# ಸುತ್ತೋಲೆ

**ವಿಷಯ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2020-21 ಹಾಗೂ 2021-22ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳ ಗೌರವಧನಕ್ಕಾಗಿ ಬಿಡುಗಡೆ ಮಾಡಲಾಗಿದ್ದ ಅನುದಾನದಲ್ಲಿ ಕೊರತೆಯಾಗಿರುವ ಅನುದಾನದ ಮಾಹಿತಿ ಹಾಗೂ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸುವ ಕುರಿತು.

**ಉಲ್ಲೇಖ:** 1. ಈ ಕಛೇರಿಯ ಅನುದಾನದ ಬಿಡುಗಡೆಯ ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ ಅ.ಉ.ಸ/04/2020-21, ದಿ:04.08.2021, 17.08.2021, 02.09.2021, 08.11.2021 ಹಾಗೂ ದಿ:14.12.2021.
2. ಈ ಕಛೇರಿಯ ಸುತ್ತೋಲೆಯ ಪತ್ರಸಂಖ್ಯೆಯ ದಿ:05.07.2021, 23.07.2021 ಹಾಗೂ ದಿ:23.11.2021.

* * * * * * *

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಛೇರಿಯಿಂದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 2020-21ನೇ ಸಾಲಿನ 1, 3 & 5 ಮತ್ತು 2, 4 & 6ನೇ ಸೆಮಿಸ್ಟರ್ ಅವಧಿಗೆ ಹಾಗೂ 2021-22ನೇ ಸಾಲಿನಲ್ಲಿ 1, 3 & 5ನೇ ಸೆಮಿಸ್ಟರ್ ಅವಧಿಗೆ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ಇಲಾಖೆಯ ಇ.ಎಂ.ಐ.ಎಸ್ ತಂತ್ರಾಂಶದಲ್ಲಿ ಲಭ್ಯವಿರುವ ಮಾಹಿತಿಯಂತೆ ಅತಿಥಿ ಉಪನ್ಯಾಸಕರುಗಳಿಗೆ ಉಲ್ಲೇಖ(1)ರ ದಿನಾಂಕ:14.12.2021ರಂದು ಗೌರವಧನಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಪ್ರಾಂಶುಪಾಲರುಗಳು ಪ್ರಾದೇಶಿಕ ಜಂಟಿ ನಿರ್ದೇಶಕರುಗಳ ಕಛೇರಿಯಿಂದ ಅನುಮೋಧನೆಯನ್ನು ಪಡೆದು, ಬಿಡುಗಡೆ ಮಾಡಲಾಗಿರುವ ಅನುದಾನವನ್ನು ದಿನಾಂಕ:20.01.2022ರೊಳಗೆ ಬಿಲ್ಲನ್ನು ಮಾಡಿ ಅತಿಥಿ ಉಪನ್ಯಾಸಕರುಗಳಿಗೆ ವಿತರಿಸಲು ಕ್ರಮಗೈಗೊಳ್ಳಲು ಸೂಚಿಸಲಾಗಿರುತ್ತದೆ. ನಂತರ ಕೇಂದ್ರಕಛೇರಿಯಿಂದ ಖಜಾನೆ-2ರಲ್ಲಿ ಉಳಿಕೆಯಾಗುವ ಅನುದಾನವನ್ನು ವಾಪಸ್ಸು ತೆಗೆದುಕೊಳ್ಳಲಾಗುವುದು.

ಮುಂದುವರೆದು ಕಾಲೇಜುಗಳು ಅನುದಾನ ಕೊರತೆಯಾಗಿದ್ದಲ್ಲಿ ಹಾಗೂ ಬಾಕಿ ಗೌರವಧನವನ್ನು ಇ.ಎಂ.ಐ.ಎಸ್ ಪಟ್ಟಿಯೊಂದಿಗೆ ತಾಳೆ ಮಾಡಿ, ಈಗಾಗಲೇ ಬಿಡುಗಡೆ ಮಾಡಲಾಗಿರುವ ಅನುದಾನದೊಂದಿಗೆ ತಾಳೆ ಮಾಡಿ ವ್ಯತ್ಯಾಸದ ಮೊತ್ತದೊಂದಿಗೆ ದೃಢೀಕೃತ ಇ.ಎಂ.ಐ.ಎಸ್ ಪಟ್ಟಿಯೊಂದಿಗೆ ಮಾಹಿತಿಯನ್ನು ಸಲ್ಲಿಸುವುದು ಹಾಗೂ ಬಿಡುಗಡೆ ಮಾಡಲಾಗಿರುವ ಅನುದಾನದ ಬಳಕೆ ಪ್ರಮಾಣಪತ್ರವನ್ನು ಕೂಡ ಇ-ಮೇಲ್ ವಿಳಾಸ dcegfbudget@gmail.comಕ್ಕೆ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಮಾಹಿತಿಯನ್ನು ಎಕ್ಸೆಲ್ ಫಾರ್ಮೆಟ್‌ನಲ್ಲಿ ದಿನಾಂಕ:24.01.2022ರೊಳಗೆ ಕಳುಹಿಸಿಕೊಡಲು ಸೂಚಿಸಲಾಗಿದೆ. ಮತ್ತು ನಿಗಧಿತ ಅವಧಿಯ ನಂತರ ಬರುವ ಪ್ರಸ್ತಾವನೆಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಹಿಂದಿನ ಸಾಲಿನ ಗೌರವಧನಕ್ಕಾಗಿ ಅನುದಾನವನ್ನು ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಿದ್ದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ ಎಂಬ ಮಾಹಿತಿಯನ್ನು ಈ ಮೂಲಕ ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ.**
ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು.**

1. ಪ್ರಾದೇಶಿಕ ಜಂಟಿ ನಿರ್ದೇಶಕರು. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರ್ಗಿ – 2021-22ನೇ ಸಾಲಿಗೆ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ಅನುಮೋದನೆಯನ್ನು ನೀಡುವ ಸಂಬಂಧ ಕಾಲೇಜುಗಳಿಂದ ಮಾಹಿತಿಯನ್ನು ಪಡೆದು ಅನುಮೋದನೆಯನ್ನು ನೀಡುವ ಸಂಬಂಧ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಲಾಗಿದೆ..
2. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್ ಅಳವಡಿಸಲು ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ.

## ಅನುಬಂಧ-1

ಕಾಲೇಜಿನ ಹೆಸರು :
ಪ್ರಾಂಶುಪಾಲರ ಹೆಸರು & ಮೊಬೈಲ್ ಸಂಖ್ಯೆ :

2020-21ನೇ ಸಾಲಿನ 1, 3 & 5 ಮತ್ತು 2021-22 ನೇ ಸಾಲಿನ 2, 4 & 6ನೇ ಸೆಮಿಸ್ಟರ್ ಅವಧಿಗೆ ಕೊರತೆಯಾಗಿರುವ ಅನುದಾನದ ಮಾಹಿತಿ

| ಕ್ರ. ಸಂ | ಮಾರ್ಚ್-2021 | ಮೇ -2021 | ಜೂನ್-2021 | ಜುಲೈ-2021 | ಆಗಸ್ಟ್-2021 | ಸೆಪ್ಟೆಂಬರ್-2021 | ಕೊರತೆಯಾಗಲು ಕಾರಣ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

## ಅನುಬಂಧ-2

ಕಾಲೇಜಿನ ಹೆಸರು :
ಪ್ರಾಂಶುಪಾಲರ ಹೆಸರು & ಮೊಬೈಲ್ ಸಂಖ್ಯೆ :

**2021-22 ನೇ ಸಾಲಿನಲ್ಲಿ 1, 3 ಮತ್ತು 5ನೇ ಸೆಮಿಸ್ಟರ್ ಅವಧಿಗೆ ನೇಮಕಗೊಂಡು ಅಕ್ಟೋಬರ್-2021 ರಿಂದ ಡಿಸೆಂಬರ್-2021ರ ಮಾಹೆವರೆಗೆ ಬಿಡುಗಡೆಯಾಗಿದ್ದ ಅನುದಾನದಲ್ಲಿ ಕೊರತೆಯಾಗಿರುವ ಅನುದಾನದ ಮಾಹಿತಿ**

| ಕ್ರ. ಸಂ | ಅಕ್ಟೋಬರ್-2021 | | ನವೆಂಬರ್-2021 | | ಡಿಸಂಬರ್-2021 | | ಕೊರತೆಯಾ ಗಿರುವ ಒಟ್ಟು ಅನುದಾನದ ಮೊತ್ತ | ಕೊರತೆ ಯಾಗಲು ಕಾರಣ |
|---|---|---|---|---|---|---|---|---|
| | ಇ.ಎಂ.ಐ.ಎಸ್ ಪಟ್ಟಿ ಪ್ರಕಾರ ಕೇಂದ್ರ ಕಛೇರಿಯಿಂದ ಬಿಡುಗಡೆಯಾಗಿರುವ ಅನುದಾನದ ಮೊತ್ತ | ಇ.ಎಂ.ಐ.ಎಸ್ ತಂತ್ರಾಂಶದಲ್ಲಿ ಮಾಹಿತಿ ಅಪ್ ಲೋಡ್ ಆಗದೇ ಕೊರತೆಯಾಗಿರುವ ಅನುದಾನದ ಮೊತ್ತ | ಇ.ಎಂ.ಐ.ಎಸ್ ಪಟ್ಟಿ ಪ್ರಕಾರ ಕೇಂದ್ರ ಕಛೇರಿಯಿಂದ ಬಿಡುಗಡೆಯಾಗಿರುವ ಅನುದಾನದ ಮೊತ್ತ | ಇ.ಎಂ.ಐ.ಎಸ್ ತಂತ್ರಾಂಶದಲ್ಲಿ ಮಾಹಿತಿ ಅಪ್‌ಲೋಡ್ ಆಗದೇ ಕೊರತೆಯಾಗಿರುವ ಅನುದಾನದ ಮೊತ್ತ | ಇ.ಎಂ.ಐ.ಎಸ್ ಪಟ್ಟಿ ಪ್ರಕಾರ ಕೇಂದ್ರ ಕಛೇರಿಯಿಂದ ಬಿಡುಗಡೆಯಾಗಿರುವ ಅನುದಾನದ ಮೊತ್ತ | ಇ.ಎಂ.ಐ.ಎಸ್ ತಂತ್ರಾಂಶದಲ್ಲಿ ಮಾಹಿತಿ ಅಪ್ ಲೋಡ್ ಆಗದೇ ಕೊರತೆಯಾಗಿರುವ ಅನುದಾನದ ಮೊತ್ತ | | |
| 1 | 2 | 3 | 4 | 5 | 6 | 7 | 8 | 9 |

## ಅನುಬಂಧ-3

ಕಾಲೇಜಿನ ಹೆಸರು :
ಪ್ರಾಂಶುಪಾಲರ ಹೆಸರು & ಮೊಬೈಲ್ ಸಂಖ್ಯೆ :

| ಕ್ರ. ಸಂ | ಜನವರಿ-2022 | ಫೆಬ್ರವರಿ-2022 | ಮಾರ್ಚ್-2022 | ಒಟ್ಟು ಅನುದಾನ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| | | | | | |